ದ್ದಾರೆ. ಮಾನ್ಯ ಸದಸ್ಯರ ಕ್ಷೇತ್ರವಾದ ಚನ್ನಪಟ್ಟಣದಲ್ಲಿ ಹಾಲೆ ಮರದ ಕೈಗಾರಿಕೆಗಳು ನಡೆಯುತ್ತಿವೆ. ಅಲ್ಲೆಲ್ಲಾ ಈಗ ಹಾಲೆ ಮರದ ಕೊರತೆ ಇದೆ. ಈ ಸಣ್ಣ ಕೈಗಾರಿಕೆಗಳನ್ನು ಉಳಿಸುವೆಕೆನ್ನುವ ದೃಷ್ಟಿಯಿಂದ ಹೇಳುವುದಾದರೆ ಹಾಲೆ ಮರದ ಕಚ್ಚಾ ಸಾಮಗ್ರಿಗಳನ್ನು ಅವರಿಗೆ ಅಗತ್ಯವಾಗಿ ಒದಗಿಸಿಕೊಡಬೇಕಾಗಿದೆ. ಆ ಅರಣ್ಯ ಭೂಮಿಯಲ್ಲಿ ಹಾಲೆ ಮರಗಳನ್ನು ಬೆಳೆಸತಕ್ಕಂಥ ಉದ್ದೇಶ ಅರಣ್ಯ ಇಲಾಖೆಗೆ ಇದೆ. ಅಲ್ಲಿ ಹಾಲೆ ಮರಗಳನ್ನು ಬೆಳೆಸಿದರೆ ಈ ಸಣ್ಣ ಕೈಗಾರಿಕೆಗಳಿಗೆ ಹಾಲೆ ಮರಗಳನ್ನು ಕೊಡುವುದಕ್ಕಾಗುತ್ತದೆ. ಅವರು ಹಾಲೆ ಮರದ ಕಚ್ಚಾ ಮಾಲು ಇಲ್ಲದೇ ಅವರೆಲ್ಲಾ ತೊಂದರೆಗೆ ಒಳಗಾಗಿದ್ದಾರೆ. ಬೇರೆ ಬೇರೆ ಪ್ರದೇಶಗಳಿಗಿಂತ ಆ ಪ್ರದೇಶ ಇವತ್ತು ಹಾಲೆ ಮರಗಳಿಗೆ ಹೆಸರಾದಂಥ ಪ್ರದೇಶ ಮತ್ತು ಹಾಲೆ ಮರದ ಸಣ್ಣ ಕೈಗಾರಿಕೆಗಳಿಗೆ ಹೆಸರಾದಂಥ ಪ್ರದೇಶ ಆದು. ಈ ಹಾಲೆ ಮರದ ಕೊರತೆಯಿಂದಾಗಿ ಆ ಉದ್ಯಮಕ್ಕೇ ಬಲವಾದ ಏಟು ಬಿದ್ದಿದೆ. ಅದನ್ನು ನಾವೆಲ್ಲಾ ಗಮನದಲ್ಲಿಟ್ಟುಕೊಂಡು ಮಾತನಾಡಬೇಕು. ನಮಗೆ ಕೂಡ ಬಡವರ ಕಷ್ಟವನ್ನು ಮಾನವೀಯತೆ ದೃಷ್ಟಿಯಿಂದ ನೋಡತಕ್ಕಂಥ ತೆರೆದ ಕಣ್ಣು ಇದೆ ನೀವು ಹೇಳಿರತಕ್ಕಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಸರ್ಕಾರ ಸೂಕ್ತವಾಗಿ ಪರಿಶೀಲಿಸುತ್ತದೆ.

ಶ್ರೀ ಡಿ.ಟಿ. ರಾಮು.—ಸ್ವಾಮಿ, ಮಾನ್ಯ ಮಂತ್ರಿಯವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಕಾಗೋಡಿನಲ್ಲಿ ಈ ವಿಚಾರದಲ್ಲಿ ಕ್ರಾಂತಿಕಾರಕವಾದ ಇತಿಹಾಸವನ್ನೇ ನಿರ್ಮಿಸಿದ್ದಾರೆ. ಅವರಿಂದ ಇಂತಹ ಉತ್ತರ ಬರುತ್ತಿರುವುದನ್ನು ಕೇಳಿ ನನಗೆ ನಿಜಕ್ಕೂ ಆಶ್ಚರ್ಯವಾಗುತ್ತಿದೆ. ಸ್ವಾಮಿ, ಅಲ್ಲಿ ಹಾಲೆ ಮರಗಳು ಇಲ್ಲ, ಅಲ್ಲಿ ಜಾಯಿಕಾಯಿಯ ಮರಗಳು ಇವೆ. ನಾನು ಅಲ್ಲಿ ಹೋಗಿ ನೋಡಿದ್ದೇನೆ. ತಾವು ಕಾಡು ಮಂತ್ರಿಗಳಾಗಿದ್ದಾಗ ನಾನು ತಮ್ಮ ಅಧಿಕಾರಿಗಳ ಜೊತೆಯಲ್ಲಿ ಹೋಗಿ ಆ ಕಾಡನ್ನು ಪರಿಶೀಲನೆ ಮಾಡಿದಾಗ ಅಲ್ಲಿ ಏನೇನೂ ಇಲ್ಲ, ಅಲ್ಲಿ ಕಾಡು ಬೆಳೆಸುವುದಕ್ಕೆ ಆ ಭೂಮಿ ಉಪಯೋಗವಾಗಿಲ್ಲ. ಆದಕಾರಣ ಈ ಬಗ್ಗೆ ತಾವು ಆ ಬಡರೈತರಿಗೆ ಆ ಜಮೀನನ್ನು ಮಂಜೂರು ಮಾಡಿಕೊಡತಕ್ಕಂಥ ಒಂದು ಮಾನವೀಯತೆಯ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ –ಸ್ವಾಮಿ, ಮಾನವೀಯತೆಯ ದೃಷ್ಟಿಯಿಂದ ನಾವು ಈಗಲೂ ಆ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಈ ವಿಚಾರವನ್ನು ನಾವು ನಮ್ಮ ಸಹೋದ್ಯೋಗಿ ಅರಣ್ಯ ಸಚಿವರಿಗೆ ಹೇಳುತ್ತೇವೆ. ಅವರು ಇನ್ನೊಂದು ಸಾರಿ ಅಲ್ಲಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಲಿ. ಆ ಬಡರೈತರಿಗೆ ಸಹಾಯ ಮಾಡತಕ್ಕಂಥ ಅವಕಾಶ ಸಿಕ್ಕಿದರೆ ನಾವು ಖಂಡಿತವಾಗಿಯೂ ಅವರಿಗೆ ಸಹಾಯ ಮಾಡುವುದಕ್ಕೆ ಆಲೋಚನೆ ಮಾಡುತ್ತೇವೆ, ಇದರಲ್ಲಿ ನಾವು ಹಿಂದೆ ಹೋಗುವುದಿಲ್ಲ

Electricity Board Sub-Divisions in Bidar District

81. SRI BHEEMANNA KHANDRE (Bhalki).—Will the Minister of State for Power be pleased to state:

(a) number of Karnataka Electricity Board Sub-Divisions established in Bidar District ;

(b) out of this, the number of Sub-Divisions, which have been provided with Lorry, Jeep and Store Rooms (Sub Division) wise details may kindly be furnished;

(c) if not the specific reasons for not providing may be furnished ;

(d) when these Sub-Divisions would be provided with Lorries, Jeeps and Store Rooms?

SRI G.H. ASWATHA REDDY (Minister of State for Power).—

(a) Seven Sub-Divisions.

(b) Four sub-stations.

Sl. No.	Name of the Sub-Divn.	Lorry, Jeep provided		Store Room
		Lorry Nos.	Jeep Nos.	Whether Store Room Provided or not
1	2	3	4	5
1.	Bidar	1	1	Provided
2.	Aurad	1	1	do
3.	Basavakalyan	1	1	do
4	Humnabad	1	1	do

(c) The matter of providing Lorry, Jeep and Store facilities in respect of other Sub-Dtvisions at Mannekhally Kamthana and Bhalki is under active consideration of the Karnataka Electricity Board.

(d) Vehicles, Stores etc., will be provided when justified by workload.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ತಾವು ಉತ್ತರದಲ್ಲಿ. ಈ ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ೭ ಸಬ್ ಡಿವಿಜನ್‌ಗಳನ್ನು ಮಾಡಿದ್ದೀರೆಂದು ಹೇಳಿದ್ದೀರಿ. ಬೀದರ್ ತಾಲ್ಲೂಕಿನಲ್ಲಿ ೨, ಹುಮ್ನಾಬಾದ್‌ನಲ್ಲಿ ೨, ಭಾಲ್ಕಿ, ಔರಾದ್, ಬಸವಕಲ್ಯಾಣದಲ್ಲಿ ತಲಾ ಒಂದೊಂದು ಸಬ್‌ಡಿವಿಜನ್ ಮಾಡುವುದಕ್ಕೆ ಹೊರಟಿದ್ದೀರಿ. ಈ ೫ ತಾಲ್ಲೂಕುಗಳ ಪೈಕಿ ೪ ತಾಲ್ಲೂಕುಗಳಲ್ಲಿ ಜೀಪ್, ಲಾರಿ ಮತ್ತು ಸ್ಟೋರ್ ರೂಮ್‌ಗಳನ್ನು ಕೊಟ್ಟಿದ್ದೀರಿ. ಇನ್ನು ಭಾಲ್ಕಿ ತಾಲ್ಲೂಕಿನಲ್ಲಿ ಈ ಸೌಕರ್ಯಗಳನ್ನು ಕೊಟ್ಟಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಜೆ.ಹೆಚ್. ಅಶ್ವತ್ಥರೆಡ್ಡಿ.—ಸ್ವಾಮಿ, ಅಲ್ಲಿ ಪ್ರತಿಯೊಂದು ವಿಭಾಗದಲ್ಲೂ ಎಷ್ಟೆಷ್ಟು ವರ್ಕ್‌ಲೋಡ್ ಇದೆ ಎಂಬುದನ್ನು ನೋಡಿಕೊಂಡು ಜೀಪ್, ಲಾರಿ ಮತ್ತು ಸ್ಟೋರ್ ರೂಮ್‌ಗಳನ್ನು ನಾವು ಕೊಟ್ಟಿದ್ದೇವೆ. ನಾವು ಕೊಟ್ಟಿರತಕ್ಕಂಥ ಲಾರಿಗಳು, ಜೀಪುಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿಯೂ ಉಪಯೋಗಿಸಿದ್ದಾರೆ. ನಾವು ೫ ಸಬ್‌ಸೆಂಟರ್‌ಗಳಲ್ಲಿ ಈ ಎಲ್ಲಾ ಸೌಕರ್ಯಗಳನ್ನು ಕೊಟ್ಟಿದ್ದರೂ ಕೂಡ ಅದನ್ನು ೭ ಸಬ್‌ಸೆಂಟರ್‌ಗಳಲ್ಲಿ ಎಲ್ಲದಕ್ಕೂ ಉಪಯೋಗಿಸುತ್ತಿದ್ದಾರೆ. ನೀವು ಹೇಳಿರತಕ್ಕಂಥ ಕಡೆ ವರ್ಕ್‌ಲೋಡ್ ಜಾಸ್ತಿಯಾದರೆ ಆ ಬಗ್ಗೆ ಪುನಃ ಪರಿಶೀಲನೆ ಮಾಡಿ ಜೀಪ್, ಲಾರಿ ಮತ್ತು ದಾಸ್ತಾನು ಕೊಠಡಿಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ನನ್ನ (ಡಿ) ಪ್ರಶ್ನೆಗೆ ಉತ್ತರವಾಗಿ ವರ್ಕ್‌ಲೋಡ್ ಆಧಾರದ ಮೇಲೆ ವಾಹನಗಳು, ದಾಸ್ತಾನು ಕೊಠಡಿ ಇತ್ಯಾದಿಗಳನ್ನು ಒದಗಿಸಲಾಗುವುದು ಎಂದು ತಾವು ಹೇಳಿದ್ದೀರಿ. ನಾನು ಕೇಳುತ್ತಿದ್ದೇನೆ, ಇದನ್ನು ಕೊಡಬೇಕಾದರೆ ಕ್ರೈಟೀರಿಯಾ ಏನಿದೆ? ವರ್ಕ್‌ಲೋಡ್ ಎಷ್ಟು ಬೇಕಾಗುತ್ತದೆ ? ಸ್ಟೋರ್ ರೂಮ್ ಕೊಡಬೇಕಾದರೆ ಇರತಕ್ಕಂಥ ಕ್ರೈಟೀರಿಯಾ ಏನು ? ಅದಕ್ಕೆ ವರ್ಕ್‌ಲೋಡ್ ಎಷ್ಟು ? ಲಾರಿಯನ್ನು ಕೊಡಬೇಕಾದರೆ ಎಷ್ಟು ವರ್ಕ್‌ಲೋಡ್ ಇರಬೇಕು? ಜೀಪ್ ಕೊಡಬೇಕಾದರೆ ಎಷ್ಟು ವರ್ಕ್‌ಲೋಡ್ ಇರಬೇಕು ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ.—ಈ ವಿಚಾರದಲ್ಲಿ ಸ್ಪಷ್ಟವಾಗಿ ವರ್ಕ್‌ಲೋಡ್ ಇಷ್ಟೇ ಇರಬೇಕು ಎಂದು ನಿಗಧಿಯಿಲ್ಲ. ಆದರೂ ವರ್ಕ್‌ಲೋಡ್ ಮೇಲೆ ಇದನ್ನೆಲ್ಲಾ ಕೊಡುತ್ತಿದ್ದೇವೆ. ಬೀದರ್‌ನಲ್ಲಿ ೧೨೮ ಪರ್ಸೆಂಟ್‌ನಷ್ಟು ವರ್ಕ್‌ಲೋಡ್ ಇದೆ. ಇನ್ನು ರೂರಲ್ ಏರಿಯಾಗಳಲ್ಲಿ ವರ್ಕ್‌ಲೋಡ್ ಬಹಳ ಕಡಿಮೆ ಇದೆ. ಬೀದರ್ ತಾಲ್ಲೂಕಿಗೆ ಕೊಟ್ಟಿರತಕ್ಕಂಥ ಜೀಪ್, ಲಾರಿಗಳನ್ನು ಭಾಲ್ಕಿ ಮತ್ತು ಇತರ ತಾಲ್ಲೂಕಿಗಳಿಗೂ ಉಪಯೋಗಿಸುತ್ತಿದ್ದಾರೆ. ಅಲ್ಲಿ ವರ್ಕ್‌ಲೋಡ್ ಜಾಸ್ತಿಯಾದರೆ ಅಂತಹ ಸಮಯ ಬಂದರೆ ಸರ್ಕಾರದಿಂದ ಅದನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನಿಸುತ್ತದೆ. ಅಲ್ಲೆಲ್ಲಾ ಈಗ ೧೦೦ಕ್ಕೆ ೯೦ ಭಾಗ ಎಲೆಕ್ಟ್ರಿಫಿಕೇಷನ್ ಆಗುತ್ತಿದೆ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ತಾಪು ಬೀದರ್ ತಾಲ್ಲೂಕಿನಲ್ಲಿ ಟೂರ್ ಮಾಡಿದಾಗ ನಾನು ಈ ಬಗ್ಗೆ ರೆಪ್ರಸೆಂಟೇಷನ್ ಕೊಟ್ಟಿದ್ದೇನೆ. ಭಾಲ್ಕಿ ತಾಲ್ಲೂಕಿನಲ್ಲಿ ಕೂಡ ನಿಮ್ಮ ಅಧಿಕಾರಿಗಳು ಈ ಬಗ್ಗೆ ಜನರಿಂದ ಕಂಪ್ಲೇಂಟ್ ತೆಗೆದುಕೊಂಡು ಹೋಗಿದ್ದಾರೆ. ಆಲ್ಲಿ ಅನೇಕ ಕಡೆಗಳಲ್ಲಿ ಕಂಬಗಳು ಬಿದ್ದು ಹೋಗಿವೆ, ಎಷ್ಟೋ ಕಡೆ ವೈರ್‌ಗಳನ್ನು ಹಾಕಿಲ್ಲ. ಈ ಬಗ್ಗೆ ಜನರು ದೂರು ಕೊಟ್ಟಿದ್ದಾರೆ. ವೈರ್‌ಗಳನ್ನು, ಕಂಬಗಳನ್ನು ಬೇರೆ ಕಡೆಗಳಿಂದ ತೆಗೆದುಕೊಂಡು ಬರುವುದಕ್ಕೆ ಲಾರಿ ಇಲ್ಲ, ಜೀಪ್ ಇಲ್ಲ. ನಮ್ಮ ಭಾಗದ ಜನರು ಅಸಿಸ್ಟೆಂಟ್ ಇಂಜಿನಿಯರ್ ಹತ್ತಿರ ಹೋಗಿ ಕೇಳಿದಾಗ, 'ಅಲ್ಲಿಗೆ ಕೊಡುವುದಕ್ಕೆ ರೂಲ್ಸ್ ಇಲ್ಲ, ಅದಕ್ಕಾಗಿ ಪ್ರೊವೈಡ್ ಮಾಡುವುದಕ್ಕಾಗುವುದಿಲ್ಲ' ಎಂದು ಹೇಳಿದ್ದಾರೆ. ಇದು ನಿಜವೇ? ಇದು ಈ ರೀತಿ ಇದ್ದಾಗ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಅದನ್ನೆಲ್ಲಾ ಬೀದರ್, ಹುಮ್ನಾಬಾದ್‌ಗಳಿಂದ ತರಬೇಕಾದರೂ ಕೂಡ ಅವರು ಲಾರಿ, ಜೀಪ್‌ಗಳನ್ನು ಕೊಡುವುದಕ್ಕೆ ಸಿದ್ದರಿಲ್ಲ. ಅವರು ಭಾಲ್ಕಿ ತಾಲ್ಲೂಕಿಗೆ ಏನನ್ನೂ ಕೊಡುತ್ತಾ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ತಾವು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ, ವರ್ಕ್‌ಲೋಡ್ ಆಧಾರದ ಮೇಲೆ ನಾವು ಲಾರಿ ಮತ್ತು ಜೀಪುಗಳನ್ನು ಕೊಟ್ಟಿದ್ದೇವೆ. ಅಂತಹ ತೊಂದರೆಗಳು ಜಾಸ್ತಿಯಾಗಿ ಅವಶ್ಯವೇನಾದರೂ ಇದ್ದರೆ ಜಾಸ್ತಿ ಲಾರಿ ಮತ್ತು ಜೀಪುಗಳನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ಈಗ ಬಸವಕಲ್ಯಾಣ ಮತ್ತು ಹುಮನಾಬಾದ್ ಈ ಎರಡು ತಾಲ್ಲೂಕುಗಳಿಗೂ ವರ್ಕ್‌ಲೋಡ್‌ಗೆ ಸರಿಯಾದ ಲಾರಿ ಮತ್ತು ಜೀಪ್‌ಗಳನ್ನು ಕೊಟ್ಟಿದ್ದೀರಿ. ಆದರೆ ಭಾಲ್ಕಿ ಮತ್ತು ಬೀದರ್ ೨ ಕಡೆಯೂ ಕೂಡ ಸಾವಿರಾರು ಜನರು ಇರಿಗೇಷನ್ ಪಂಪ್‌ಸೆಟ್‌ಗಳನ್ನು ಹಾಕಿಕೊಂಡಿದ್ದಾರೆ. ಆದ್ದರಿಂದ ಅಲ್ಲಿಗೆ ಲಾರಿ ಮತ್ತು ಜೀಪ್ ಹಾಗೂ ಒಂದು ಸ್ಟೋರ್ ರೂಂ ಕೊಡುವುದು ಬಹಳ ಅಗತ್ಯವಾಗಿದೆ. ಇದನ್ನು ತಾವು ಎಷ್ಟು ವರ್ಷಗಳಲ್ಲಿ ಒದಗಿಸಿಕೊಡುತ್ತೀರಾ ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ.—ಈಗ ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ೫ ಜೀಪ್ ಮತ್ತು ಲಾರಿಗಳು ಇವೆ. ಮತ್ತೆ ಅಲ್ಲಿ ವರ್ಕ್‌ಲೋಡ್ ಜಾಸ್ತಿಯಿಲ್ಲ ಪಂಪ್‌ಸೆಟ್‌ಗಳಿಗೆ ಏನಾದರೂ ಅನುಕೂಲವಾದರೆ ನಾವು ಖಂಡಿತವಾಗಿ ಅಲ್ಲಿಗೆ ಸ್ಟೋರ್ ರೂಂ ಮತ್ತು ಲಾರಿ ಹಾಗೂ ಜೀಪ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

SRI BHEEMANNA KHANDRE.—Sir, the difficulty is not only in one or two sub-divisions, but it is there through out the State. In view of the work load, why are you not providing adequate jeeps, lorries and store room facilities? If you do not provide all these things, the delay will go on increasing.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ.—ಆ ತರಹ ಕಂಡೀಷನ್ ಮೇಲೆ ನಾವು ವರ್ಕ್‌ಲೋಡ್ ನೋಡಿ ಕೊಟ್ಟಿದ್ದೇವೆ. ೩ ಡಿವಿಜನ್‌ಗಳಿಗೆ ಒಂದರಂತೆ ಒಂದೊಂದು ಡಿವಿಜನ್‌ಗೂ ಸಹಾ ನಾವು ಲಾರಿ ಮತ್ತು ಜೀಪ್‌ಗಳನ್ನು ಕೊಟ್ಟಿದ್ದೇವೆ. ಇನ್ನೂ ಜಾಸ್ತಿ ಬೇಕಾಗಿದ್ದರೆ ಅದನ್ನು ನಾವು ಎಗ್ಜಾಮಿನ್ ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

SRI V.M. KUSHNOOR.—In my constituency one sub-division is there. This sub-division was established two years back covering

about 70 villages under its jurisdiction. For the last two years, at least three thousand wells have been energised under its jurisdication. Asst. Engineers, and Junior Engineers are not touring in these villages stating that they are not having jeeps. So, they have to be provided with jeeps. In this respect, what action the Government proposes to take?

ಶ್ರೀ ಜಿ.ಹೆಚ್. ಆಶ್ವತ್ಥರೆಡ್ಡಿ — ಮಾನ್ಯ ಅಧ್ಯಕ್ಷರೇ ನಾನು ಬೀದರ್ ಜಿಲ್ಲೆಯಲ್ಲಿ ಪ್ರವಾಸಕ್ಕೆ ಹೋಗಿದ್ದಾಗ ನಮ್ಮ ಮಾನ್ಯ ಸದಸ್ಯರು ಹೇಳಿದ್ದರು. ಆದರ ಮೇಲೆ ನಾನು ತಕ್ಷಣ ಕ್ರಮ ತೆಗೆದು ಕೊಂಡು ವಿಗ್ಲಾಮಿನ್ ಮಾಡಿದ್ದೇನೆ. ಅಲ್ಲಿಗೆ ಬೇಕಾದ ಲಾರಿ ಮತ್ತು ಜೀಪುಗಳನ್ನು ಕಳುಹಿಸಿಕೊಡುತ್ತೇವೆ. ಆದರೆ ಸ್ವಲ್ಪ ತಡವಾಗುತ್ತದೆ.

SRI V.M. KUSHNOOR.—Sir, there is some difference between the prablems of Bidar District and other districts. At present, about 15,000 wells have been energised. every time, there will be some disturbance and as a result of which Asst. Engineers will have to go and visit these villages. For every 4 hours there will be shut down of power. People are coming and complaining about all these things. But, these engineers cannot go to the spots because they do not have vehicles. I want to know why the Government is not taking action on this ?

ಶ್ರೀ ಜಿ.ಹೆಚ್. ಆಶ್ವತ್ಥರೆಡ್ಡಿ.—ಪೆಡ್‌ಡೌನ್ ಕೆಲವು ವೇಳೆ ಹೈಓಲ್ಟೇಜ್ ಮತ್ತು ಲೋಓಲ್ಟೇಜ್ ಇರುವುದರಿಂದ ಆ ತರಹ ಆಗುತ್ತದೆ. ಇನ್ನು ಮುಂದೆ ಈ ಸಮಸ್ಯೆ ಇರುವುದಿಲ್ಲ. ಮತ್ತು ಅಲ್ಲಿಗೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಬೇಕು ಎಂದು ಹೇಳಿದ್ದಾರೆ ಅದನ್ನು ಎಗ್ಜಾಮಿನ್ ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Mal-practices in the K. E. B.

91. SRI P. N. REDDY (Malur).—Will the Minister of State for Power be pleased to state ;

(a) whether it is a fact that servicing of Electricity is being delayed on the pretext that meters are not available.

(b) whether they are aware that in some cases servicing is done under direct connections.

(c) whether they are also aware that this has given room for mal-practices in the Karnataka Electricity Board.

(d) whether they are also aware that as a result of this fresh consumers are neglected and are harassed.

(e) the action they have taken or proposed to take to help the consumers ?